# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, **ಗುರುವಾರ, ೨೯,** ಜನವರಿ, ೨೦೨೬ ( **ಮಾಘ** , ೦೯, ಶಕವರ್ಷ, ೧೯೪೭)<br>**BENGALURU, THURSDAY, 29, JANUARY, 2026** ( **MAGHA** , 09, SHAKAVARSHA, 1947) | ನಂ. ೧೧೫<br>**No. 115** |
|---|---|---|

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ/354/ಜಿಪಸ/2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 29-01-2026

## ಅಧಿಸೂಚನೆ

ನಗರಾಭಿವೃದ್ಧಿ ಇಲಾಖೆಯು, ಯಾದಗಿರಿ ಜಿಲ್ಲೆಯ, ಶಹಾಪೂರ ತಾಲ್ಲೂಕಿನ ಕೆಲವು ಗ್ರಾಮಗಳನ್ನು, ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಿ ಆದೇಶಿಸಿರುತ್ತದೆ, ಅದರನ್ವಯ ಸದರಿ ತಾಲ್ಲೂಕಿನ ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಗಳನ್ನು ಮರು ನಿಗದಿಪಡಿಸಬೇಕಾಗಿರುತ್ತದೆ. ಆದುದರಿಂದ ಸರ್ಕಾರವು ದಿನಾಂಕ:16-12-2023ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿನ, ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಜಿಲ್ಲಾ ಪಂಚಾಯಿತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದು ದಿನಾಂಕ:06-01-2026ರಂದು ಆದೇಶಿಸಿದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-ಇ ರಡಿ ರಚಿತವಾಗಿರುವ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು, ಅಧಿನಿಯಮದ ಪ್ರಕರಣ 308-ಎಫ್ ರಡಿಯಲ್ಲಿನ ಉಪಬಂಧಗಳನುಸಾರ ಯಾದಗಿರಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಶಹಾಪೂರ ತಾಲ್ಲೂಕಿನಿಂದ ಆಯ್ಕೆಯಾಗುವ ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹಾಗೂ ಶಹಾಪೂರ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶವನ್ನು **5** ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ, ಅವುಗಳ ಸೀಮಾ/ಗಡಿಯನ್ನು ನಿರ್ಣಯಿಸಿ, ಶಿಫಾರಸ್ಸು ವರದಿಯನ್ನು ದಿನಾಂಕ: 27-01-2026ರಂದು ಸಲ್ಲಿಸಿರುತ್ತದೆ.

ಈ ಶಿಫಾರಸ್ಸು ವರದಿಯನ್ನು ಸರ್ಕಾರವು ಅಂಗೀಕರಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 160, 161 ಹಾಗೂ 163ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಯಾದಗಿರಿ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಜಿಲ್ಲಾ ಪಂಚಾಯಿತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **"ಅ"** ರಂತೆ ಹಾಗೂ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರು ಮತ್ತು ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳನ್ನು ಕೋಷ್ಟಕ **"ಆ"** ರಂತೆ ನಿಗದಿಪಡಿಸಿ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**ಕೋಷ್ಟಕ "ಅ"**

| ಯಾದಗಿರಿ ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| | ಶಹಾಪೂರ | 5 |

**ಕೋಷ್ಟಕ "ಆ"**

| ಯಾದಗಿರಿ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| 1 | **ಶಹಾಪೂರ** | 11-ವನದುರ್ಗಾ | ವನದುರ್ಗಾ, ಚೆನ್ನೂರ(ಕೆ), ಕಕ್ಕಸಗೇರಾ, ಬೂದನೂರ, ಬೋವಿಕಾಡಮಗೇರಾ, ಆಲ್ದಾಳ, ಚಾಮನಾಳ, ಚಂದಾಪೂರ, ದರ್ಶನಾಪೂರ, ಗುಂಡಾಪೂರ, ನಡಿಹಾಳ, ಉಕ್ಕಿನಾಳ, ಹಾರಣಗೇರಾ, ರಬ್ಬನಹಳ್ಳಿ, ಕರಕಿಹಳ್ಳಿ. |
| 2 | **ಶಹಾಪೂರ** | 12-ಸಗರ | ಸಗರ, ಹೊಸಕೇರಾ, ಶೆಟ್ಟಿಕೇರಾ, ರಾಜಾಪೂರ(ಬಿ), ಮಹಲರೋಜಾ,ನಾಗನಟಗಿ, ಗಂಗನಾಳ,ಬಾಣತಿಹಾಳ, ಸೈದಾಪೂರ, ಉಮರದೊಡ್ಡಿ, ದರಿಯಾಪೂರ. |
| 3 | **ಶಹಾಪೂರ** | 13-ರಸ್ತಾಪೂರ | ರಸ್ತಾಪೂರ,ಶಾರದಹಳ್ಳಿ, ವಿಭೂತಿಹಳ್ಳಿ, ಕನ್ಯಾಕೊಳ್ಳೂರು, ತಿಪ್ಪನಳ್ಳಿ, ಬೆನಕಹಳ್ಳಿ(ಜೆ), ನಂದಿಹಳ್ಳಿ(ಕೆ)(ಡಿ), ಹತ್ತಿಗೂಡುರ, ಕೊಂಗಂಡಿ ಎಸ್. ಆರ್, ಮಂಡಗಳ್ಳಿ, ಕೊಳ್ಳುರು, ಟೊಣ್ಣೂರ, ಗೌಡೂರ, ಮರಕಲ್, ಚಂದ್ರಾಳ(ಡಿ), ಬೀರನೂರ, ಕಾಟಮನಹಳ್ಳಿ, ಸಾವೂರ, ನಂದಿಹಳ್ಳಿ(ಜೆ), ಪರಸಾಪೂರ, ಹಳಿಸಗರ (ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿ ಹೊರತುಪಡಿಸಿ). |
| 4 | **ಶಹಾಪೂರ** | 14-ಶಿರವಾಳ | ಶಿರವಾಳ, ಅಣಬಿ, ರೋಜಾ ಎಸ್.ಶಿರವಾಳ, ಇಟಗಾ ಎಸ್.ಶಿರವಾಳ, ಹಂದ್ರಾಳ(ಡಿ), ಇಬ್ರಾಹಿಂಪೂರ, ತಂಗಡಗಿ, ಹುರಸಗುಂಡಗಿ, ಬಿದರಾಣಿ, ಹಬ್ಬಳ್ಳಿ, ಖಾನಾಪೂರ, ಗುಂಡಳ್ಳಿ, ಮನಗನಾಳ, ಚಟ್ನಳ್ಳಿ, ನಾಲವಡಗಿ, ಕರಣಗಿ, ಬಲಕಲ್, ಮರಮಕಲ್, ಮೂಡಬೂಳ, ಅರಳಹಳ್ಳಿ, ಸಲಾದಪೂರ, ಬಿಲ್ಹಾಡ(ಡಿ). |
| 5 | **ಶಹಾಪೂರ** | 15-ಗೋಗಿ(ಕೆ) | ಗೋಗಿ(ಕೆ), ಗೋಗಿಪೇಠ, ನಗ್ನಿನಾಳ(ಡಿ), ಮದ್ದರಕಿ, ಕೊಡಮನಳ್ಳಿ, ಸಾದ್ಯಾಪೂರ, ಸಿಂಗನಹಳ್ಳಿ, ಇಂಗನಾಳ(ಡಿ), ಹೋತಪೇಠ, ಹಾಲಬಾವಿ, ಮಕ್ತಾಪೂರ, ದಿಗ್ಗಿ, ಇಂಗಳಗಿ, ಮಡ್ನಾಳ, ರಾಜಾಪೂರ(ಕೆ)(ಡಿ). |
| 6 | **ಶಹಾಪೂರ** | 16- | ನಗರಾಭಿವೃದ್ದಿ ಇಲಾಖೆಯು, ಯಾದಗಿರಿ ಜಿಲ್ಲೆಯ, ಶಹಾಪೂರ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸಿರುವ ಹಿನ್ನೆಲೆಯಲ್ಲಿ, ಸರ್ಕಾರವು ದಿನಾಂಕ:16-12-2023ರಂದು ಪ್ರಕಟಿಸಿದ್ದ ಅಧಿಸೂಚನೆಯಲ್ಲಿನ ಶಹಾಪೂರ ತಾಲ್ಲೂಕಿನ 16ನೇ ಜಿಲ್ಲಾ ಪಂಚಾಯಿತಿ ಕ್ಷೇತ್ರವನ್ನು ಕೈಬಿಡಲಾಗಿದೆ. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH